**ದಿನಾಂಕಃ 25.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಎ ಪಿ ಪಿ ರವರಿಂದಃ–

(ಮಾನ್ಯ ಎಪಿಪಿ ರವರು ತಮ್ಮ ಪರವಾಗಿ ಮುಂದುವರೆದ ಮುಖ್ಯವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ)

**ಪಾಟೀ ಸವಾಲು: ಶ್ರೀ ಎಂ ಎನ್ ಪಿ., ಆರೋಪಿ ಪರ ವಕೀಲರಿಂದ**

ದೂರನ್ನು ಚಾಸಾ–1 ರವರೇ ಟೈಪ್ ಮಾಡಿಸಿಕೊಂಡು ತಂದಿದ್ದರು. ಬಿಸನಹಳ್ಳಿಯಿಂದ ನಮ್ಮ ಠಾಣೆಗೆ ಸುಮಾರು 15 ಕಿ.ಮೀ ಅಂತವಿರುತ್ತದೆ. ದೂರನ್ನು 4.30 ಗಂಟೆಗೆ ನೀಡಿದ್ದು ನಾನು ಕೂಡಲೇ ಪ.ವ.ವರದಿಯನ್ನು ದಾಖಲಿಸಿಕೊಂಡಿರುತ್ತೇನೆ. ಪ್ರ.ವ.ವರದಿಯನ್ನು ದಾಖಲಸಿಕೊಳ್ಳುವ ಮೊದಲು ಆರೋಪಿತರನ್ನು ವಿಚಾರಣೆ ಮಾಡಿರುವುದಿಲ್ಲ. ಚಾಸಾ–1 ರವರಿಗೆ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿಯೂ ನಾನು ಅವರಿಗೆ ದೂರನ್ನು ಓದಿ ತಿಳಿಸಿರುತ್ತೇನೆಂದು ನುಡಿಯುತ್ತಾರೆ. ಚಾಸಾ–1 ರವರ ಸಹಿಯನ್ನು ಮಹಜರಿಗೆ ಪಡೆದಿರುವುದಿಲ್ಲ. ಆ ದಿನ ಚಾಸಾ–1 ರವರು ಘಟನಾ ಸ್ಥಳದಲ್ಲಿ ಇದ್ದರೂ ಎಂದರೆ ಸರಿ.

ಚಾಸಾ–1 ರವರು ನನಗೆ ದೂರನ್ನು ನೀಡಿರುವುದಿಲ್ಲ ಹಾಗೂ ನಾನು ಸ್ಥಳಕ್ಕೆ ಹೋಗಿ ಮಹಜರು ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರು ಕೂಡ ಆತನ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.